> ಕಾದಂಬರಿಕಾರನೆಂದರೆ ತನ್ನ ಹಾದಿಯನ್ನು ಇರುವೆಯಂತೆ ಬಹಳ ನಿಧಾನವಾಗಿ ತಾಳ್ಮೆಯಿಂದ ಕ್ರಮಿಸುವವನು. ಕಾದಂಬರಿಕಾರ ತನ್ನ ದೈತ್ಯ ಶಕ್ತಿಯಿಂದಾಗಲಿ ರೊಮ್ಯಾಂಟಿಕ್ ದರ್ಶನದಿಂದಾಗಲಿ ನಮ್ಮನ್ನು ಪ್ರಭಾವಿಸುವುದಿಲ್ಲ. ಆತ ತಾಳ್ಮೆಯಿಂದ ನಮ್ಮನ್ನು ಸೆಳೆಯುತ್ತಾನೆ.

ಕಟುಟೀಕೆ, ಸ್ವಾಗತಗಳು ಮೊದಲಾದವು. ಈಗ ದುರದೃಷ್ಟವಶಾತ್ ನನ್ನ ರಾಜಕೀಯ ಟೀಕೆಗಳಿಂದಾಗಿ ಕುಖ್ಯಾತನಾಗಿದ್ದೇನೆ. ಕೆಲವು ಟರ್ಕಿಯ ರಾಷ್ಟ್ರೀಯವಾದಿ ಪತ್ರಕರ್ತರು ಈ ಟೀಕೆಗಳಲ್ಲಿ ಹೆಚ್ಚಿನದನ್ನು ಅಂತರರಾಷ್ಟ್ರೀಯ ಸಂದರ್ಶನಗಳಿಂದ ಆಯ್ದುಕೊಂಡು, ಅವುಗಳನ್ನು ತಿರುಚಿ ನನ್ನನ್ನು ಮೂರ್ಖನಂತೆ ಬಿಂಬಿಸುತ್ತಿದ್ದಾರೆ.

◆ ಅಂದರೆ, ನಿಮ್ಮ ಖ್ಯಾತಿಯನ್ನು ಸಹಿಸುತ್ತಿಲ್ಲ?

ನನ್ನ ಪುಸ್ತಕಗಳ ದಾಖಲೆ ಮಾರಾಟ ಹಾಗೂ ರಾಜಕೀಯ ಟೀಕೆಗಳಿಗೆ ಇದು ನನಗೆ ಸಿಗುತ್ತಿರುವ ಶಿಕ್ಷೆ ಎಂದು ಅನ್ನಿಸುತ್ತದೆ. ಇದರ ಬಗ್ಗೆ ಮಾತಾಡಿದರೆ ನನ್ನನ್ನು ನಾನೇ ಸಮರ್ಥಿಸಿಕೊಳ್ಳುವಂತಿರುತ್ತದೆ. ಇಡಿ ಚಿತ್ರಣವನ್ನು ತಪ್ಪಾಗಿ ಅರ್ಥೈಸಿದಂತಿರುತ್ತದೆ. ಹಾಗಾಗಿ ಈ ಕುರಿತು ಮಾತಾಡುವುದಿಲ್ಲ.

◆ ನೀವು ಎಲ್ಲಿ ಕೂತು ಬರೆಯುವಿರಿ?

ಮಲಗುವ ಜಾಗ ಅಥವಾ ನಿಮ್ಮ ಸಂಗಾತಿಯೊಂದಿಗಿರುವ ಜಾಗ ಮತ್ತು ಬರೆಯುವ ಜಾಗ ಬೇರೆಯಾಗಿರಬೇಕು ಎಂದು ನನಗೆ ಯಾವಾಗಲೂ ಅನ್ನಿಸುತ್ತದೆ. ಕೌಟುಂಬಿಕ ಕೆಲಸಗಳು ಮತ್ತು ವಿವರಗಳು ಕಾಲ್ಪನಿಕತೆಯನ್ನು ಕೊಲ್ಲುತ್ತವೆ. ನನ್ನೊಳಗಿನ ಶಕ್ತಿಯನ್ನು ಕೊಲ್ಲುತ್ತವೆ. ಕೌಟುಂಬಿಕ ವಾತಾವರಣ, ದೈನಿಕ ಕೆಲಸಗಳು ಮತ್ತೊಂದು ಲೋಕಕ್ಕೆ ಹಾತೊರೆಯುತ್ತವೆ. ಅದು ಸಾಧ್ಯವಾಗುವುದು ಕಾಲ್ಪನಿಕತೆ ಗರಿಗೆದರಿದಾಗ ಮಾತ್ರ. ಆ ತರಹದ ಜಾಗವಿಲ್ಲದಿದ್ದಾಗ ಅದು ಸಾಧ್ಯವಾಗುವುದಿಲ್ಲ. ಸುಮಾರು ವರ್ಷ ಕೆಲಸ ಮಾಡಲೆಂದೇ ಆಫೀಸೋ ಅಥವಾ ಒಂದು ಜಾಗವನ್ನೋ ಮನೆಯಿಂದ ಹೊರಗೆ ವ್ಯವಸ್ಥೆ ಮಾಡಿಕೊಂಡಿದ್ದೆ. ಇದಕ್ಕಾಗಿಯೇ ಫ್ಲ್ಯಾಟುಗಳನ್ನು ಇಟ್ಟುಕೊಂಡಿದ್ದೆ.

ಒಮ್ಮೆ ಅಮೆರಿಕದಲ್ಲಿ ಅರ್ಧಸೆಮಿಸ್ಟರ್ ಕಳೆಯಬೇಕಾಯಿತು. ಆಗ ನನ್ನ ಆಗಿನ ಹೆಂಡತಿ ಕೊಲಂಬಿಯಾ ವಿವಿಯಲ್ಲಿ ಪಿಎಚ್.ಡಿ. ಮಾಡುತ್ತಿದ್ದಳು. ನಾವು ಮದುವೆಯಾದ ವಿದ್ಯಾರ್ಥಿಗಳಿಗಾಗಿ ಇದ್ದ ಅಪಾರ್ಟ್‌ಮೆಂಟಿನಲ್ಲಿದ್ದೆವು. ಅಲ್ಲಿ ಬರೆಯಲು ಪ್ರತ್ಯೇಕ ಜಾಗವಿರಲಿಲ್ಲ. ಮಲಗುವ ಬರೆಯುವ ಜಾಗ ಒಂದೇ ಆಗಿತ್ತು. ಕೌಟುಂಬಿಕ ಬದುಕಿನ ಸಂಗತಿಗಳು ಸುತ್ತಲೂ ಹರಡಿಕೊಂಡಿದ್ದವು. ಅದು ನನಗೆ ರೇಜಿಗೆ ಹುಟ್ಟಿಸುತ್ತಿತ್ತು. ಬೆಳಗಾಗುತ್ತಿದ್ದಂತೆ ಆಫೀಸಿಗೆ ಹೋಗುವವನಂತೆ ಮನೆಯಿಂದ ಹೊರಡುತ್ತಿದ್ದೆ. ಒಂದಷ್ಟು ಹೊತ್ತು ಸುತ್ತಾಡಿ ಆಫೀಸಿನಿಂದ ಮನೆಗೆ ಬಂದವನ ಹಾಗೆ ಹಿಂತಿರುಗುತ್ತಿದ್ದೆ.

ಹತ್ತು ವರ್ಷಗಳ ಹಿಂದೆ ಬಾಸ್ಪೊರಸ್ ಜಲಸಂಧಿ ಹಾಗೂ ನಗರದ ಪೂರ್ಣ ನೋಟ ಕಾಣುವಂತಿದ್ದ ಫ್ಲ್ಯಾಟೊಂದು ಸಿಕ್ಕಿತ್ತು. ಅಲ್ಲಿಂದ ಕಾಣುತ್ತಿದ್ದ ಇಸ್ತಾಂಬುಲ್‌ನ ನೋಟ ಅತ್ಯದ್ಭುತವಾಗಿತ್ತು. ನಾನಿದ್ದ ಜಾಗದಿಂದ ಅಲ್ಲಿಗೆ ಇಪ್ಪತ್ತೈದು ನಿಮಿಷದ ನಡಿಗೆ. ಅಲ್ಲಿ ರಾಶಿ ರಾಶಿ ಪುಸ್ತಕಗಳಿದ್ದವು. ನನ್ನ ಮೇಜನ್ನು